<u>ದಿಃ **19.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ.ಕೆ.ಹೆಚ್.ಇ ವಕೀಲರಿಂದಃ **1** ರಿಂದ **8** ನೇ ಪ್ರತಿವಾದಿಯರ ಪರವಾಗಿಃ</u>

**20)** ಈರಪ್ಪ ಈತನು 1 ನೇ ಪ್ರತಿವಾದಿ ವೀರಭದ್ರಪ್ಪನ ಹೆಸರಿನಲ್ಲಿ ವಿಲ್ ಬರೆದಿಟ್ಟ ವಿಷಯ ಈರಪ್ಪ ಈತನು ಮೃತಪಟ್ಟ ನಂತರ ತಿಳಿದಿರುತ್ತದೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಿ.ಪಿ-15 ನೊಂದಾಯಿತ ವಿಲ್‌ನ ದೃಢೀಕೃತ ಹಾಜರುಪಡಿಸಿರುವದಿಲ್ಲ, ಆದರೆ ನಮ್ಮ ವಕೀಲರು ಹಾಜರುಪಡಿಸಿರುತ್ತಾರೆ. ಮೊದಲಿಗೆ ನಾನು ಸದರಿ ವಿಲ್‌ನ ದೃಢಿಕೃತ ನಕಲನ್ನು ವಕೀಲರಿಗೆ ಕೊಟ್ಟಿರುವದಿಲ್ಲ, ಆದರೆ ವಕೀಲರು ಸ್ವತಃ ಅದರ ದೃಢೀಕೃತ ಪ್ರತಿಯನ್ನು ತೆಗೆಯಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ನಿ.ಪಿ-15 ಮೃತ್ಯು ಪತ್ರದಲ್ಲಿನ ಬರೆದಂತಹ ಎಲ್ಲ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿ.ಪಿ-15 ದಾಖಲಾತಿಯಲ್ಲಿ ಈರಪ್ಪ ಈತನು 1 ನೇ ವೀರಭದ್ರಪ್ಪ ಈತನ ಹೆಸರಿನಲ್ಲಿ ವಿಲ್ ಅನ್ನು ಬರೆದುಕೊಡುವಾಗ ಆತನು ದೈಹಿಕವಾಗಿ ಸರಿಯಾಗಿ ಇದ್ದನು ಎಂದು ಬರೆದಿರುತ್ತದೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಸರಿಯಲ್ಲ ಎಂದು ನುಡಿಯುತ್ತಾರೆ.

**21)** ಅಗಡಿ ಗ್ರಾಮದಲ್ಲಿ ಮನೆಯ ಪಂಚಾಯತ ನಂಬರಃ 1297 ಇದು ಮೊದಲಿಗೆ ನನ್ನ ತಂದೆಯ ಹೆಸರಿನಲ್ಲಿ ಇತ್ತು ಅಂದರೆ ಸರಿ. ಶ್ರೀಮತಿ ಪುಟ್ಟವ್ವ ಕೋಂ ವಿಜಯಕುಮಾರ ದುಂಡಿ ನನಗೆ ಹೆಂಡತಿಯಾಗಬೇಕು. ಅದೇ ರೀತಿ ಶ್ರೀಮತಿ ಲಕ್ಷ್ಮೀ ಕೋಂ ಚನ್ನವೀರಪ್ಪ ದುಂಡಿ ನನ್ನ ತಮ್ಮನ ಹೆಂಡತಿಯಾಗಬೇಕು. ಅಗಡಿ ಗ್ರಾಮದಲ್ಲಿರುವ ಆಸ್ತಿ ಪಂಚಾಯತ ನಂಬರಃ 1297 ಇದು ಮೊದಲಿಗೆ ನಮ್ಮ ತಂದೆಯ ಹೆಸರಿನಲ್ಲಿತ್ತು, ನಮ್ಮ ತಂದೆ ಮೃತಪಟ್ಟ ನಂತರ ಸದರಿ ಆಸ್ತಿಯು ವಾರಸಾ ನಾತೆಯಿಂದ ನಮ್ಮೆಲ್ಲರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಅಂದರೆ ಸರಿ. ಸಾಕ್ಷಿಗೆ ಪಂಚಾಯತ ನಂಬರಃ 1297 ಈ ಆಸ್ತಿಗೆ ವಾರಸಾ ನಾತೆಯಿಂದ ಸಾಕ್ಷಿದಾರರ ಹೆಸರು ವರ್ಗಾವಣೆ ಮಾಡಲು ಕೊಟ್ಟಂತಹ ಅರ್ಜಿಯ

ದೃಢೀಕೃತ ನಕಲನ್ನು ತೋರಿಸಿದಾಗ ಸಾಕ್ಷಿಯು ಒಪ್ಪಿದ್ದರಿಂದ ಸದರಿ ಅರ್ಜಿಯ ದೃಢೀಕೃತ ನಕಲನ್ನು ನಿ.ಡಿ-1 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲಿಗಾಗಿ ಅವಕಾಶ ಕೇಳಲಾಗಿ, ಅವಕಾಶ ಕೊಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ,
ಹಾವೇರಿ.